you don't have second thought about this. ಆ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಏನಃ ಅಧ್ಯಕ್ಷರ ಚೇಂಬರ್‌ಗೆ ಹೋಗುವುದು ಬರುವುದು, ಆ ವಿಷಯ ಬೇರೆ. ನಾವೂ ಅಧ್ಯಕ್ಷರೂ ಅಕ್ಕ ಪಕ್ಕದ ತಾಲ್ಲೂಕಿನವರು. ಅರ್ಜೆಂಟ್ ಇದ್ದರೆ ಮಂತ್ರಿಗಳಿಗಿಂತ ಮೊದಲೇ ನಾನು ಅಲ್ಲಿ ಹೋಗಿರತ್ತೇನೆ ಹೋಗಬಾರದು ಎನ್ನುವ ಅಭಿಪ್ರಾಯ ಇಲ್ಲ. ಈಗಾಗಲೇ ಹೇಳಿದಂತೆ ಈ ವಿಷಯದ ಬಗ್ಗೆ ಚರ್ಚೆ ಯಾಗಲು ಅನುಕೂಲವಾಗುವಂತೆ ಅವಕಾಶವನ್ನು ಈ ಸದನದಲ್ಲಿ ಕಲ್ಪಿಸಿಕೊಟ್ಟರೆ ಬಹಳ ಸಂತೋಷ ವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್—ಮಾನ್ಯ ಅಧ್ಯಕ್ಷರೇ, ನಾನೂ ತಮಗೆ ಒಂದೂ ನೋಟೀಸನ್ನು ಕಳುಹಿಸಿ ಕೊಟ್ಟಿದ್ದೆ. ಅದು ಏನಾಯಿತು ? ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು. ಅದೂ ಕೂಡ ಇದರಂತೆಯೇ ಬಹಳ ಗಂಭೀರವಾದ ಪ್ರಶ್ನೆ. ಇಷ್ಟೇ ಗಂಭೀರತೆ ಅದಕ್ಕೂ ಇದೆ.

ಅಧ್ಯಕ್ಷರು.—ನನ್ನ ಚೇಂಬರ್‌ಗೆ ನೀವೂ ಕೂಡ ಬನ್ನಿ ನೋಡೋಣ.

ಶ್ರೀ ಕೆ. ಬಿ ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಇದೇ ವಿಷಯದ ಮೇಲೆ ನಾನೂ ಒಂದು ನೋಟೀಸನ್ನು ಕಳುಹಿಸಿ ಕೊಟ್ಟಿದ್ದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಅಧ್ಯಕ್ಷರು.—ಅದೇನು ಎಂಬುದನ್ನು ನೋಡೋಣ. ದಯವಿಟ್ಟು ಈಗ ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ಅಲೆಂಬಿಕ್‌ನ ಕಾರ್ಮಿಕರು ಸುಮಾರು ೯೦೦ ಜನರು ಪ್ರದರ್ಶನ ಬಂದು ಇಲ್ಲಿ ಹೊರಗೆ ಕುಳಿತಿದ್ದಾರೆ. ಅನ್ನವಿಲ್ಲದೇ ಅವರು ಸಾಯುತ್ತಿದ್ದಾರೆ ಅಲ್ಲಿ ಸತ್ತಿರುವ ಕಾರ್ಮಿಕರ ಬಗ್ಗೆ ನಾವು ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ತಮ್ಮನ್ನು ಕೇಳುತ್ತಿದ್ದೇವೆ...

ಅಧ್ಯಕ್ಷರು.—ಈ ವಿಷಯವನ್ನು ನಾಳೆ ಮಧ್ಯಾಹ್ನ ತೆಗೆದುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೊಬ್ಬರು ಮಾನ್ಯ ನಾರಾಯಣಕುಮಾರ್‌ರವರ ಬಗ್ಗೆ ಮಾತನಾಡಿ ಅವರನ್ನು *** ಎಂದು ಹೇಳಿದರು. ಅದು ರೆಕಾರ್ಡ್‌ಗೆ ಹೋಗಿದೆ. ಆ ಪದಗಳನ್ನು ತೆಗೆದುಹಾಕಬೇಕು.

ಶ್ರೀ ಕೆ ಹೆಚ್. ಪಾಟೀಲ್.—ಇದನ್ನು ನೀವು ಏತಕ್ಕೆ ಹೇಳುತ್ತಿದ್ದೀರಿ ? ಮಾನ್ಯ ನಾರಾಯಣ ಕುಮಾರ್‌ರವರೇ ಎದ್ದುನಿಂತು ನಾನು *** ಎಂದು ಹೇಳುವುದಕ್ಕೆ ಅವರಿಗೆ ಅಧಿಕಾರ ಇದೆ. ಆದ್ದರಿಂದ ಅವರೇ ಹೇಳಿಕೊತ್ತಾರೆ.

ಗಮನ ಸೆಳೆಯುವ ಸೂಚನೆ

(i) ಭೂನ್ಯಾಯಂ ಮಂಡಳಿಗಳಲ್ಲಿ ಗೇಣಿದಾರರ ವಿರುದ್ಧ ತೀರ್ಮಾನಕ್ಕೆ ಹೈಕೋರ್ಟಿಗೆ ಅರ್ಜಿ ಸಲ್ಲಿಸಿರುವುದು

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಭೂನ್ಯಾಯ ಮಂಡಳಿಗಳಲ್ಲಿ ಗೇಣಿದಾರರ ವಿರುದ್ಧವಾಗಿ ತೀರ್ಮಾನವಾಗಿರುವ ಪ್ರಕರಣಗಳಲ್ಲಿ ಕರ್ನಾಟಕ ಹೈಕೋರ್ಟ್‌ಗೆ ರಿಟ್ ಅರ್ಜಿಯನ್ನು ಸಲ್ಲಿಸಿರುವ ಬಗ್ಗೆ ಮಾನ್ಯ ಕಂದಾಯ, ಯೋಜನೆ ಮತ್ತು ಕಾರ್ಮಿಕ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಹಾಗೂ ಯೋಜನಾ ಖಾತೆ ಸಚಿವರು),—ಮಾನ್ಯ ಅಧ್ಯಕ್ಷರೇ, ಭೂನ್ಯಾಯ ಮಂಡಳಿಗಳಲ್ಲಿ ಬಡ ಗೇಣಿದಾರರ ವಿರುದ್ಧ ತೀರ್ಮಾನವಾಗಿರುವ ಅರ್ಹ ಪ್ರಕರಣಗಳಲ್ಲಿ ಸರಕಾರದವರು ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಸಲ್ಲಿಸುವ ಮೂಲಕ ಸಹಾಯ ಮಾಡಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ ೧೯೬೧ರ ಕಲಂ ೧೨೭ರ ಪ್ರಕಾರ ಅವಕಾಶವಿದೆ.

---

* Expunged as ordered by the Chair

ಇಂತಹ ೯೫೧೭ ಪ್ರಕರಣಗಳಲ್ಲಿ ಅರ್ಜಿಗಳನ್ನು ಕರ್ನಾಟಕ ಹೈಕೋರ್ಟ್‌ಗೆ ಬಡ ಗೇಣಿದಾರರ ಪರವಾಗಿ ಸಲ್ಲಿಸಲಾಗಿದೆ. ಈ ಪೈಕಿ ೨,೯೪೬ ರಿಟ್ ಅರ್ಜಿಗಳು ತೀರ್ಮಾನವಾಗಿವೆ.

ಇವುಗಳ ವಿವರ ಈ ಕೆಳಗೆ ಕಂಡಂತೆ ಇದೆ.

೧.	ಪರಿಶಿಷ್ಟ ಜಾತಿ	...	೬೦
೨.	ಪರಿಶಿಷ್ಟ ವರ್ಗ	...	೧೪
೩.	ಇತರೆ	...	೨,೮೭೨
	ಒಟ್ಟಿಗೆ		೨,೯೪೬

ಈ ಬಗ್ಗೆ ಸಂತೋಲೆಗಳನ್ನು ಎಲ್ಲಾ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಮತ್ತು ತಹಶೀಲ್ದಾರರಿಗೆ ಕಳುಹಿಸಿದ್ದು, ಇಂತಹ ಆರ್ಜಿ ಪ್ರಕರಣಗಳನ್ನು ಹಾಡುಂಕಿ ಮೇಲ್ಮನವಿಯಂತೆ ಜಿಲ್ಲಾ ಭೂಸುಧಾರಣೆ ಅಪೀಲು ಪ್ರಾಧಿಕಾರಗಳಲ್ಲಿ ಸಲ್ಲಿಸಲು ಜಿಲ್ಲಾ ಕಾನೂನು ನೆರವು ಸಮಿತಿಗಳಿಗೆ ಕಳುಹಿಸಿ ಕೊಡಲು ಸೂಚಿಸಲಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್. — ತಾವು ಎಲ್ಲಾ ಜಿಲ್ಲಾಧಿಕಾರಿಗಳು ಉಪ ವಿಭಾಗಾಧಿಕಾರಿಗಳು ಹಾಗೂ ತಹಸೀಲ್ದಾರ್‌ರವರಿಗೆ ಸುತ್ತೋಲೆಗಳನ್ನು ಕಳುಹಿಸಿಕೊಟ್ಟಿದ್ದೀರಿ. ಆದರೆ ಹೈ-ಕೋರ್ಟ್ ನಿರ್ಣಯದ ಪ್ರಕಾರ ೩೨ ಸಾವಿರ ಕೇಸುಗಳು ಗೇಣಿದಾರರ ವಿರುದ್ಧವಾಗಿ ತೀರ್ಮಾನವಾಗಿವೆ. ಇವುಗಳನ್ನು ಮತ್ತೆ ಅಪೀಲು ಮಾಡಿಕೊಳ್ಳುವಂತೆ ಅವರು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಆದರೂ ಕೂಡ ಈ ಬಗ್ಗೆ ಅಪೀಲು ಮಾಡಿಕೊಳ್ಳುವ ಕಾರ್ಯವನ್ನು ತಾವು ತೆಗೆದುಕೊಂಡಿಲ್ಲ. ಇದನ್ನು ಅಪೀಲು ಮಾಡಿಕೊಂಡು ನಂತರ ಟ್ರಿಬ್ಯುನಲ್‌ಗೆ ಅವುಗಳನ್ನು ಕಳುಹಿಸಲು ಸಾಧ್ಯತೆ ಇದೆ. ಇದನ್ನು ನೀವು ಏತಕ್ಕೆ ಮಾಡಿಲ್ಲ? ಸುಮಾರು ೩೨ ಸಾವಿರ ಕೇಸುಗಳು ಇತ್ತೀಚೆಗೆ ಬಂದವುಗಳಲ್ಲ. ನೀವು ಅಧಿಕಾರಕ್ಕೆ ಬರುವುದಕ್ಕಿಂತಲು ಪಂಜಿನಿಂದ ಇರತಕ್ಕವು. ಆದ್ದರಿಂದ, ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಿಕೊಡಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ — ಈ ಪ್ರಕರಣಗಳನ್ನು ಪರಿಶೀಲಿಸಿ ಯೋಗ್ಯವಾದ ಪ್ರಕರಣ ಗಳೆಂದು ಕಂಡುಬಂದವುಗಳನ್ನು ಅಪೀಲು ಮಾಡಲು ಕ್ರಮಕೈಗೊಳ್ಳುತ್ತೇವೆ.

(ii) ರಾಜಾಜಿನಗರಕ್ಕೆ ಕಲುಷಿತ ನೀರು ಸರಬರಾಜಾಗುತ್ತಿರುವ ಬಗ್ಗೆ

ಶ್ರೀ ಎಂ.ಎಸ್. ಕೃಷ್ಣನ್. — ರಾಜಾಜಿನಗರದಲ್ಲಿ ಕಳೆದ ೧೫ ದಿವಸಗಳಿಂದ ಕಂಡಿಯುವ ನೀರಿನ ಜೊತೆ, ಮಣ್ಣು, ಹೆಂಟೆ ಇತ್ಯಾದಿಗಳು ಬರುತ್ತಿರುವುದರ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಆಹಾರ ಮತ್ತು ನಾಗರಿಕ ಪೂರೈಕೆ, ಸಂಸದೀಯ ಮತ್ತು ನಗರಾಭಿವೃದ್ಧಿ ಖಾತೆ ಸಚಿವರು). — ರಾಜಾಜಿನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ಹಿಂದೆ ನೀರಿನ ಜೊತೆ ಮಣ್ಣು, ಹೆಂಟೆ ಇತ್ಯಾದಿಗಳು ಕೆಲವೆಡೆ ಎಣ್ಣೆ ವಾಸನೆಯಿಂದ ಕೂಡಿದ ನೀರು ಸರಬರಾಜಾಗುತ್ತಿದ್ದರ ಬಗ್ಗೆ.

ಸಧ್ಯದಲ್ಲಿ ಈ ಪ್ರದೇಶಗಳಿಗೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ನೀರು ಸರಬರಾಜಾಗುತ್ತಿದೆ. ಕಳೆದ ವರ್ಷ ಜಲಾಶಯವು ಸಂಪೂರ್ಣವಾಗಿ ಬತ್ತಿ ಹೋಗಿದ್ದು ಡಿಸೆಂಬರ್ ೮೫ರಿಂದ ನೀರು ಸರಬರಾಜು ಮಾಡುವುದನ್ನು ನಿಲ್ಲಿಸಲಾಗಿತ್ತು. ಈ ಸಮಯದಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರು ನಗರಕ್ಕೆ ನೀರು ತರುವ ಪ್ರಧಾನ ಕೊಳವೆಗಳಲ್ಲಿ ಹಿಂದೆ ಕಟ್ಟಿಕೊಂಡಿದ್ದ ತುಕ್ಕು ಹಿಡಿದ ಪದರಗಳು ಕಳಚಿ ಕೊಂಡು ಕೊಳವೆಯೊಳಗೆ ಉಳಿದು ಹೋಗಿತ್ತು.

ಏಪ್ರಿಲ್, ಮೇ, ಜೂನ್ ಮಾಹೆಗಳಲ್ಲಿ ಜಲಾಶಯಕ್ಕೆ ಅಲ್ಪ ಪ್ರಮಾಣದಲ್ಲಿ ಜಲಾಗಮನವಾಗಿದ್ದು ಪುನ: ಜೂನ್ ಮಾಹೆಯಿಂದ ನಗರಕ್ಕೆ ಈ ಜಲಾಶಯದಿಂದ ೨ ಎಂ. ಗ್ಯಾ. ನೀರು ಸರಬರಾಜು